# ಮಂಗಳೂರು ವಿಶ್ವವಿದ್ಯಾನಿಲಯ

ಸಂ. ಮವಿ/05/ಸಿಬ್ಬಂದಿ(2)/2019-20

ಕುಲಸಚಿವರ ಕಚೇರಿ,
ಮಂಗಳಗಂಗೋತ್ರಿ-574199.
ದಿನಾಂಕ: 21.04.2020

## ಅಧಿಸೂಚನೆ

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಶಿಕ್ಷಕೇತರ ಉದ್ಯೋಗಿಗಳಿಗೆ ಸಂಬಂಧಿಸಿದಂತೆ ದಿನಾಂಕ 23.03.2020 ರ ತಾತ್ಕಾಲಿಕ ಜೇಷ್ಠತಾ ಪಟ್ಟಿಗಳ ಪ್ರಕಟಣೆ ಬಗ್ಗೆ.

ಉಲ್ಲೇಖ:
1. ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸಿವಿಲ್ ಅಪೀಲು ಸಂಖ್ಯೆ 2368/2011 ಬಿ.ಕೆ ಪವಿತ್ರ ಮತ್ತು ಇತರರು ವಿರುದ್ಧ ಕೇಂದ್ರ ಸರ್ಕಾರ ಮತ್ತು ಇತರರು ಮತ್ತು ಸಂಬಂಧಿಸಿದ ರಿವ್ಯೂ ಅರ್ಜಿ ಹಾಗೂ ರಿಟ್ ಅರ್ಜಿಗಳಲ್ಲಿನ ಪ್ರಕರಣ ಎಂ.ಎ ಸಂಖ್ಯೆ 1151/2018 ರಲ್ಲಿ ದಿನಾಂಕ 10.05.2019 ರಂದು ನೀಡಿದ ತೀರ್ಪು.
2. ಸರ್ಕಾರಿ ಆದೇಶ ಸಂಖ್ಯೆ ಡಿಪಿಎಆರ್ 186 ಎಸ್ಆರ್ಎಸ್ 2018 ದಿನಾಂಕ 15.05.2019 ಮತ್ತು ಸರ್ಕಾರಿ ಪತ್ರ ಸಂಖ್ಯೆ ಇಡಿ 44 ವಿವಿಧ 2018 ದಿನಾಂಕ 24.05.2019
3. ಈ ಕಚೇರಿ ಸುತ್ತೋಲೆ ಸಮಸಂಖ್ಯೆ ದಿನಾಂಕ 16.08.2019
4. ಮಾನ್ಯ ಕುಲಪತಿಯವರ ಆದೇಶ ದಿನಾಂಕ 20.04.2020

*****

ಉಲ್ಲೇಖ (1) ರಲ್ಲಿ ನಮೂದಿಸಲಾದ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಕರ್ನಾಟಕ (ರಾಜ್ಯದ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ) ನೇಮಕಾತಿ ಆಧಾರದ ಮೇಲೆ ಬಡ್ತಿ ಹೊಂದಿರುವ ಸರ್ಕಾರಿ ನೌಕರರಿಗೆ ತತ್ಪರಿಣಾಮವಾದ ಜೇಷ್ಠತೆಯನ್ನು ವಿಸ್ತರಿಸುವ ಅಧಿನಿಯಮ 2017ನ್ನು ಎತ್ತಿ ಹಿಡಿದಿರುವುದರಿಂದ ಉಲ್ಲೇಖ (2) ರ ಸರ್ಕಾರಿ ಆದೇಶಗಳಲ್ಲಿ ಸರ್ಕಾರಿ ಆದೇಶ ಸಂಖ್ಯೆ ಡಿಪಿಎಆರ್ 186 ಎಸ್ಆರ್ಎಸ್ 2018 ದಿನಾಂಕ 27.02.2019 ರಲ್ಲಿ ನೀಡಲಾದ ಸೂಚನೆ ಪ್ರಕಾರ ಕ್ರಮಕೈಗೊಳ್ಳಲು ಆದೇಶವಾಗಿರುತ್ತದೆ. ಈ ಆದೇಶದ ಕಂಡಿಕೆ 8 ಉಪಕಂಡಿಕೆ (1) (ಅ) ಮತ್ತು (ಅ)ಗಳಲ್ಲಿ ನೀಡಿರುವ ಸೂಚನೆ ಪ್ರಕಾರ ಸರ್ಕಾರಿ ಆದೇಶ ಸಂಖ್ಯೆ ಡಿಪಿಎಆರ್ 186 ಎಸ್ಆರ್ಆರ್ 2011, ದಿನಾಂಕ 06.05.2017 ರ ಪ್ರಕಾರ ತಯಾರಿಸಲಾದ ಜೇಷ್ಠತಾ ಪಟ್ಟಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ನೌಕರರ ಜೇಷ್ಠತೆಯನ್ನು ಮಾರ್ಪಡಿಸಿ ಅವರ ಮುಂಭಡ್ತಿಯನ್ನು ಪುನರಾವಲೋಕಿಸಿ, ಅವರಿಗೆ ಅರ್ಹತಾ ದಿನಾಂಕವನ್ನು ನೀಡಿ, ಹಿಂಬಡ್ತಿಗೊಳಿಸಿದ್ದಲ್ಲಿ ಅಂತಹ ಅರ್ಹತಾ ದಿನಾಂಕದ ಆಧಾರದ ಮೇಲೆ ಕೆಳಹಂತದ ವೃಂದಕ್ಕೆ ಹಿಂಬಡ್ತಿಗೊಳಿಸಿದ್ದಲ್ಲಿ ಅಂತಹ ಸರ್ಕಾರಿ ನೌಕರರನ್ನು ಅವರು ಹಿಂಬಡ್ತಿ ಹೊಂದಿದ ನಿಕಟಪೂರ್ವದಲ್ಲಿ ಧಾರಣ ಮಾಡಿದ ವೃಂದಕ್ಕೆ ಹಿಂಬಡ್ತಿ ಹೊಂದಿದ ದಿನಾಂಕದಿಂದ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ಮರುಸ್ಥಳ ನಿಯುಕ್ತಿಗೊಳಿಸತಕ್ಕದ್ದು ಹಾಗೂ ಉಪಕಂಡಿಕೆ (1) ರನ್ವಯ ಕ್ರಮವನ್ನು ಪೂರ್ಣಗೊಳಿಸಿದ ನಂತರ ಮುಂಭಡ್ತಿಯಲ್ಲಿ ಮೀಸಲಾತಿಯ ಪ್ರಸ್ತುತ ನೀತಿಯ ಪ್ರಕಾರ ಮುಂಭಡ್ತಿ ನೀಡಲಾದ ಎಲ್ಲಾ ವೃಂದಗಳ ಮತ್ತು ಆ ವೃಂದಗಳಿಗಿಂತ ಎಲ್ಲಾ ಉನ್ನತ ವೃಂದಗಳ ಜೇಷ್ಠತಾ ಪಟ್ಟಿಗಳನ್ನು ದಿನಾಂಕ 27.04.1978 ರಿಂದ ಜಾರಿಗೆ ಬರುವಂತೆ ಪುನರಾವಲೋಕಿಸಿ ಜೇಷ್ಠತಾ ಪಟ್ಟಿಗಳನ್ನು ಪರಿಷ್ಕರಿಸತಕ್ಕದ್ದು ಎಂಬುದಾಗಿ ಕಂಡಿಕೆ 8 ಉಪಕಂಡಿಕೆ (2) ರಲ್ಲಿ ಆದೇಶವಾಗಿರುತ್ತದೆ.

ಕಂಡಿಕೆ 8 ಉಪಕಂಡಿಕೆ (1)ರ ಪ್ರಕಾರ ಮಂಗಳೂರು ವಿಶ್ವವಿದ್ಯಾನಿಲಯದ ಕೆಳಹಂತದ ವೃಂದಕ್ಕೆ ಹಿಂಬಡ್ತಿಗೊಂಡ ಬೋಧಕೇತರ ಸಿಬ್ಬಂದಿಗಳನ್ನು ಈ ಕಚೇರಿ ಆದೇಶ ಸಂಖ್ಯೆ ಮವಿ/14/ಸಿಬ್ಬಂದಿ(2)/2018-19 ದಿನಾಂಕ 07.06.2019 ರಲ್ಲಿ ಹಿಂಬಡ್ತಿ ಹೊಂದಿದ ನಿಕಟಪೂರ್ವದಲ್ಲಿ ಧಾರಣೆ ಮಾಡಿದ ವೃಂದಕ್ಕೆ ಪೂರ್ವಾನ್ವಯವಾಗುವಂತೆ ಮರುಸ್ಥಳ ನಿಯುಕ್ತಿಗೊಳಿಸಲಾಗಿರುತ್ತದೆ. ಈ ರೀತಿ ಮರುಸ್ಥಳ ನಿಯುಕ್ತಿಗೊಳಿಸಿದ ದಿನಾಂಕದಂದು ಅನ್ವಯವಾಗುವಂತಹ ಸಂಬಂಧಪಟ್ಟ ವೃಂದಗಳ ಜೇಷ್ಠತಾ ಪಟ್ಟಿಗಳನ್ನು ಮಂಗಳೂರು ವಿಶ್ವವಿದ್ಯಾನಿಲಯ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗಿದೆ. (ಅನುಬಂಧ I)

ಕಂಡಿಕೆ 8 ಉಪಕಂಡಿಕೆ (2)ರಲ್ಲಿ ಆದೇಶವಾದಂತೆ ಮಂಗಳೂರು ವಿಶ್ವವಿದ್ಯಾನಿಲಯದ ಬೋಧಕೇತರ ಸಿಬ್ಬಂದಿಗಳ ಜೇಷ್ಠತಾ ಪಟ್ಟಿಗಳನ್ನು ಪುನರಾವಲೋಕಿಸಲಾಗಿರುತ್ತದೆ.

ಕರ್ನಾಟಕ ರಾಜ್ಯದ (ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗಾಗಿ) ಮೀಸಲಾತಿ ಆಧಾರದ ಮೇಲೆ ಭಡ್ತಿ ಹೊಂದಿರುವ ಸರ್ಕಾರಿ ನೌಕರರಿಗೆ ತತ್ಪರಿಣಾಮವಾದ ಜೇಷ್ಠತೆಯನ್ನು ವಿಸ್ತರಿಸುವ ಅಧಿನಿಯಮ 2017ರ ಕಲಂ 3 ಮತ್ತು 4ನ್ನು ಕಲಂ 5ರೊಡನೆ ಸಹವಾಚನ ಮಾಡಿಕೊಂಡು ಮಂಗಳೂರು ವಿಶ್ವವಿದ್ಯಾನಿಲಯವು ಸ್ಥಾಪನೆಯಾದಂದಿನಿಂದ ಜೇಷ್ಠತಾ ಪಟ್ಟಿಗಳನ್ನು ಪುನರಾವಲೋಕಿಸಲಾಗಿರುತ್ತದೆ. ಸದರಿ ಅಧಿನಿಯಮದ ಕಲಂ (3) ಮತ್ತು (4)ನ್ನು ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಈಗಾಗಲೇ ಪಾಲನೆ ಮಾಡಲಾಗಿರುವುದರಿಂದ ದಿನಾಂಕ 01.01.2017 ರ ಪ್ರಕಾರ (ಬಿ.ಕೆ. ಪವಿತ್ರ ಪ್ರಕರಣದ ಪೂರ್ವದಲ್ಲಿ) ಜಾರಿಯಲ್ಲಿದ್ದ ಜೇಷ್ಠತಾ ಪಟ್ಟಿಗಳನ್ನು ಆಧರಿಸಿ ಈ ಕಚೇರಿ ಆದೇಶ ಸಂಖ್ಯೆ ಮವಿ/12/ಸಿಬ್ಬಂದಿ(2)/2019-20 ದಿನಾಂಕ 23.03.2020ರಲ್ಲಿ ಅರ್ಹ ಸಿಬ್ಬಂದಿಗಳಿಗೆ ಮುಂಬಡ್ತಿಯನ್ನು ನೀಡಲಾಗಿರುತ್ತದೆ. ಸದರಿ ಮುಂಭಡ್ತಿ ದಿನಾಂಕದಿಂದ ಅನ್ವಯವಾಗುವ ಎಲ್ಲಾ ವೃಂದಗಳ ತಾತ್ಕಾಲಿಕ ಜೇಷ್ಠತಾ ಪಟ್ಟಿಗಳನ್ನು ಈ ಮೂಲಕ ಪ್ರಕಟಿಸಲಾಗಿದೆ.

ಅಲ್ಲದೆ, ದಿನಾಂಕ 01.01.2017 ರ ಪ್ರಕಾರ ಜಾರಿಯಲ್ಲಿದ್ದ ಜೇಷ್ಠತಾ ಪಟ್ಟಿಗಳನ್ನು ಹಾಗೂ ದಿನಾಂಕ 23.03.2020 ರಂದು ಅನ್ವಯವಾಗುವ ಜೇಷ್ಠತಾ ಪಟ್ಟಿಗಳನ್ನು ಮಂಗಳೂರು ವಿಶ್ವವಿದ್ಯಾನಿಲಯದ ವೆಬ್‌ಸೈಟಿನಲ್ಲಿ (ಅನುಬಂಧ II ಮತ್ತು ಅನುಬಂಧ III) ಪ್ರಕಟಿಸಲಾಗಿದೆ.

........2

ಈ ಬಗ್ಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ದಿನಾಂಕ **30.05.2020**ರೊಳಗೆ ಈ ಕಚೇರಿಗೆ ಸಲ್ಲಿಸಲು ಸೂಚಿಸಲಾಗಿದೆ.

ಸಹಿ/–
ಕುಲಸಚಿವರ ಪರವಾಗಿ

ರಿಗೆ,

1. ಕುಲಸಚಿವ (ಪರೀಕ್ಷಾಂಗ), ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
2. ಗ್ರಂಥಪಾಲಕರು, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
3. ಹಣಕಾಸು ಅಧಿಕಾರಿ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
4. ನಿರ್ದೇಶಕರು, ದೈಹಿಕ ಶಿಕ್ಷಣ ವಿಭಾಗ/ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ/ದೂರಶಿಕ್ಷಣ ಕೇಂದ್ರ/ಕಾಲೇಜು ಅಭಿವೃದ್ಧಿ ಮಂಡಳಿ/ಗಣಕಯಂತ್ರ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ,ಮಂಗಳಗಂಗೋತ್ರಿ.
5. ಕಾರ್ಯಕಾರಿ ಅಭಿಯಂತರರು, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ
6. ಅಧ್ಯಕ್ಷರು/ಸಂಯೋಜಕರು, ಎಲ್ಲಾ ಸ್ನಾತಕೋತ್ತರ ವಿಭಾಗಗಳು, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ ಹಾಗೂ ಪ್ರಭಾರ ನಿರ್ದೇಶಕರು ಸ್ನಾತಕೋತ್ತರ ಕೇಂದ್ರ, ಚಿಕ್ಕ ಅಳುವಾರ
7. ವೈದ್ಯಾಧಿಕಾರಿ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
8. ಮುಖ್ಯಸ್ಥರು, ಯೂಸಿಕ್/ಮೈಕ್ರೋಟ್ರೋನ್ ಸೆಂಟರ್, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
9. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು/ಫೀಲ್ಡ್ ಮಾರ್ಷಲ್ ಕೆ. ಎಂ. ಕಾರ್ಯಪ್ಪ ಕಾಲೇಜು,
ಮಡಿಕೇರಿ/ವಿಶ್ವವಿದ್ಯಾನಿಲಯ ಸಂಧ್ಯಾ ಕಾಲೇಜು, ಮಂಗಳೂರು.
10. ಆಡಳಿತ ನಿರ್ವಹಣೆಗಾರು, ನೇತ್ರಾವತಿ /ಕಾವೇರಿ ಅತಿಥಿಗೃಹ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ
11. ವಿಶೇಷಾಧಿಕಾರಿ/ಸಹಾಯಕ ಕುಲಸಚಿವರು, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
12. ಕುಲಸಚಿವರ ಕಚೇರಿಯ ಎಲ್ಲಾ ಅಧೀಕ್ಷಕರಿಗೆ
13. ಕುಲಪತಿಯವರ ಆಪ್ತ ಕಾರ್ಯದರ್ಶಿ/ಕುಲಸಚಿವರ ಆಪ್ತ ಸಹಾಯಕರು, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.

(1–13) – ಅಧಿಸೂಚನೆಯನ್ನು ತಪ್ಪದೇ ಎಲ್ಲಾ ಶಿಕ್ಷಕೇತರ ಉದ್ಯೋಗಿಗಳ ಗಮನಕ್ಕೆ ತರುವುದು.

14. ಸಂಯೋಜಕರು, DUIMS, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ. – ಸೂಕ್ತ ಕ್ರಮಕ್ಕಾಗಿ